# ಇಂದು ಎಂತಹ ಶಿಕ್ಷಣ ಬೇಕು?

ಸಿ.ರಾಮಚಂದ್ರ ಉಪಾಧ್ಯಾಯ

ಶಿಕ್ಷಣದ ಬಗೆಗೆ ಚಿಂತನೆ ಮಾಡುವ ಆವಶ್ಯಕತೆಯಿದೆಯೆ? ಶಿಕ್ಷಣ ನಮ್ಮ ಎಲ್ಲ ಅವಶ್ಯಕತೆಗಳನ್ನೂ ಈಡೇರಿಸುತ್ತಿದೆಯೆ? ಶಿಕ್ಷಣದ ಮೂಲ ಉದ್ದೇಶವೇನು? ಆ ಗುರಿಯನ್ನು ಶಿಕ್ಷಣ ತಲುಪುತ್ತಿದೆಯೆ? ಶಿಕ್ಷಣದ ವೈಭವೀಕರಣದ ಆವಶ್ಯಕತೆಯಿದೆಯೆ? ಇಂದಿನ ವೈಭವೀಕರಣದ ಶಿಕ್ಷಣದಲ್ಲಿ ಸಾಮಾಜಿಕ ಶಾಂತಿ ಸಿದ್ಧಿಸುತ್ತಿದೆಯೆ? ಇಂದಿನ ಶಿಕ್ಷಣ ಸಂಸ್ಥೆಗಳು ಶಿಕ್ಷಣೋದ್ಯಮಗಳಾದುದು ಏಕೆ? ಈ ಶಿಕ್ಷಣದಿಂದ ನಮ್ಮ ಸನಾತನ ಸಂಸ್ಕೃತಿ ಉಳಿಯುತ್ತಿದೆಯೆ, ಮನೋಬಲ, ನೈತಿಕ ಬಲ ವೃದ್ಧಿಸುತ್ತಿದೆಯೆ? ಈ ಶಿಕ್ಷಣಕ್ರಮದಿಂದ ಜೀವನಕ್ಕೊಂದು ಆಧಾರ, ಆತ್ಮಗೌರವ ಲಭಿಸುತ್ತಿದೆಯೆ? – ಹೀಗೆ ಪ್ರಶ್ನೆಗಳ ಸರಮಾಲೆ ಬೆಳೆಯುತ್ತಲೇ ಹೋಗುತ್ತದೆ, ಬೆಳೆಸುತ್ತಲೇ ಹೋಗಬಹುದು. ಬರಿಯ ಪ್ರಶ್ನೆಗಳಿಂದಲೇ ಈ ಪ್ರಬಂಧವನ್ನು ಮುಗಿಸಬಹುದು.

ಪ್ರಶ್ನೆಗಳಿಂದಲೇ ತೃಪ್ತಿ ಸಿಗಲಾರದು, ಅದಕ್ಕೆ ಸೂಕ್ತ ಉತ್ತರಗಳ ಆವಶ್ಯಕತೆಯಿದೆ. ಶಿಕ್ಷಣದ ಬಗೆಗೆ ಚಿಂತನ ಮಾಡುವ ಆವಶ್ಯಕತೆ ಮೊದಲಿಗಿಂತಲೂ ಈಗ ಹೆಚ್ಚಾಗಿ ಇದೆ. ಏಕೆಂದರೆ ಈ ದಿನಗಳಲ್ಲಿ ಶಿಕ್ಷಣ ನಮ್ಮ ಎಲ್ಲಾ ಆವಶ್ಯಕತೆಗಳನ್ನೂ ಈಡೇರಿಸುವ ಏಕೈಕ ಮಾಧ್ಯಮವಾಗಿದೆ. ಆದರೆ, ಶಿಕ್ಷಣದ ಮೂಲೋದ್ದೇಶವನ್ನು, ಅದನ್ನೇ ಬಂಡವಾಳ ಮಾಡಿಕೊಂಡವರು, ಮರೆತಿರುವಂತೆ ಕಾಣಿಸುತ್ತದೆ. ಶಿಕ್ಷಣದ ಮೂಲೋದ್ದೇಶ ಸುಪ್ತವಾದ ಮನಸ್ಸನ್ನು, ವ್ಯಕ್ತವಾಗಿರುವ ದೇಹದೊಡನೆ ಸರಿಯಾಗಿ ಬೆಳೆಸಿ, ಪೋಷಿಸಿ, ಆತ್ಮೋದ್ಧಾರ ಹೊಂದುವುದಾಗಿದೆ. ಆದರೆ ಇಂದು ಈ ಮೂಲೋದ್ದೇಶವನ್ನೇ ನಾವು ಮರೆತುಬಿಟ್ಟಿದ್ದೇವೆ.

ಈ ಸೃಷ್ಟಿಯಲ್ಲಿ ಮಾನವ ಸಂಪತ್ತು ಉಳಿದೆಲ್ಲ ಸಂಪತ್ತುಗಳಿಗಿಂತ ಬಹಳ ಉನ್ನತವಾದುದು, ಶಕ್ತಿಶಾಲಿಯಾದುದು. ಕೇವಲ ಭೌತಿಕ ಆಶೋತ್ತರಗಳೇ ಮನುಷ್ಯ ಜೀವಿತದ ಗುರಿಯಾದರೆ, ಆಗ ನಮಗೆ ಶಿಕ್ಷಣದ ಆವಶ್ಯಕತೆಯೇ ಇಲ್ಲ. ಮನುಷ್ಯನ ನಡೆನುಡಿಗಳಿಗೆ ಮಾರ್ಗದರ್ಶಕವಾದ ಅಂತರ್ಗತ ಶಕ್ತಿಯನ್ನು ಉತ್ತೇಜಿಸುವ ಸಲುವಾಗಿಯೇ ಮನುಷ್ಯನಿಗೆ ಯೋಗ್ಯ ತರಬೇತಿ ಬೇಕು; ಶಿಕ್ಷಣ ಅದನ್ನು ಈಡೇರಿಸಿಕೊಡಬೇಕು.

ಸರ್ಕಾರದಲ್ಲಿ ಶಿಕ್ಷಣಕ್ಕಾಗಿ ಒಂದು ಇಲಾಖೆ ಇದೆ. ಅದಕ್ಕೊಬ್ಬರು ಸಚಿವರು ಇದ್ದಾರೆ. ಸಚಿವರಿಗೆ ಆಪ್ತಸಹಾಯಕರು. ಇವರಿಗೆ ಎಲ್ಲ ಸಲಕರಣೆಗಳು, ಸಿಬ್ಬಂದಿವರ್ಗ, ತಜ್ಞರು, ಭವ್ಯ ಕಟ್ಟಡಗಳು, ತರಬೇತಿ ಸಂಸ್ಥೆಗಳು, ಸಂಶೋಧನ ಸಂಸ್ಥೆಗಳು – ಇವೆಲ್ಲವೂ ಬೃಹದಾಕಾರವಾಗಿಯೇ ಇವೆ. ಹೀಗೆ ಶಿಕ್ಷಣವ್ಯವಸ್ಥೆಯು ಗಾತ್ರದಲ್ಲಿ ಬೆಳೆದಿದ್ದರೂ, ಶಿಕ್ಷಣ ಪಡೆದುಕೊಂಡವರಿಂದಲೇ ಏಕೆ ಈ ಸಮಾಜಕ್ಕೆ ಇಷ್ಟೊಂದು ಅನ್ಯಾಯವಾಗುತ್ತಿದೆ? ಇದಕ್ಕೆಲ್ಲಾ ಏನು ಕಾರಣ? ನಾವು ಯಾರ ಮೇಲೆ ತಾನೇ ಆರೋಪವನ್ನು ಹೊರಿಸೋಣ? ಇದಕ್ಕೆಲ್ಲಾ ಪರಿಹಾರವಿದೆಯೆ? – ಹೀಗೆ ಚಿಂತಿಸುತ್ತಾ ಹೋದರೆ, ಕೊನೆಗೆ ಉತ್ತರ ಸಿಗುವುದು, ಭ್ರಷ್ಟ ವ್ಯವಸ್ಥೆಯೇ ಇದಕ್ಕೆ ಹೊಣೆ ಎಂದು.

ಪಾಶ್ಚಾತ್ಯರ ಪ್ರಭಾವ ನಮ್ಮ ದೇಶದ ಸಂಸ್ಕೃತಿಯ ಮೇಲೆ ಬೀರಿದಂತೆ, ನಮ್ಮ ಶಿಕ್ಷಣದ ಮೇಲೂ ಬೀರಿತು. ಹಿಂದೆ ಗುರುಪೀಠಗಳು ಶಿಕ್ಷಣಕೇಂದ್ರಗಳಾಗಿದ್ದವು, ಗುರುವೇ ಪ್ರಧಾನವಾಗಿದ್ದನು, ಪೂಜ್ಯಭಾವನೆಗೆ ಕೊರತೆಯಿರಲಿಲ್ಲ. ನಂಬಿಕೆ–ವಿಶ್ವಾಸಗಳು ತುಂಬಿಕೊಂಡಿದ್ದವು. ಗುರುವು ಆಳುವ ರಾಜನಿಗೆ ಮಾರ್ಗದರ್ಶಕನಾಗಿದ್ದನು. ರಾಜನು ಪ್ರಜಾಪ್ರತಿನಿಧಿಯಾಗಿ ನಿಷ್ಪಕ್ಷಪಾತ ಧೋರಣೆಯಿಂದ, ಗುರುವಿನ ಮಾರ್ಗದರ್ಶನದಂತೆ ರಾಜ್ಯಪರಿಪಾಲನೆ ಮಾಡುತ್ತಿದ್ದನು. ಒಬ್ಬರು ಮತ್ತೊಬ್ಬರನ್ನು ಪರಸ್ಪರ ಪ್ರೀತಿಯಿಂದ ಆಶ್ರಯಿಸಿದ್ದರು. ಜನಜೀವನ ನೆಮ್ಮದಿಯಿಂದಿತ್ತು. ಹಿಂದೆ ಶಿಕ್ಷಣವನ್ನು ಪಡೆದುಕೊಳ್ಳುವುದು ಶ್ರಮದಾಯಕವಾಗಿದ್ದರೂ, ಅದರ ದುರ್ಬಳಕೆಯಾಗುತ್ತಿರಲಿಲ್ಲ. ಏಕೆಂದರೆ ಅಂತಹ ಶಿಕ್ಷಣವಿಧಾನದಲ್ಲಿ ಸಾಮಾಜಿಕ ಹಿತಚಿಂತನೆಯಿತ್ತು. ಈ ಬಗೆಯಲ್ಲಿ ಶಿಕ್ಷಣಪಡೆದವರಿಂದ ಸಮಾಜಕ್ಕೆ ಉತ್ತಮ ಸೇವೆ ಲಭ್ಯವಾಗುತ್ತಿತ್ತು. ಪಾಶ್ಚಾತ್ಯ ಶಿಕ್ಷಣದ ಪ್ರಭಾವದಿಂದ ಈ ಸಂಸ್ಕಾರ ಕಡಮೆಯಾಗುತ್ತ ಹೋಯಿತು. ಪಾಶ್ಚಾತ್ಯ ಶಿಕ್ಷಣ ಕೇವಲ ಭಾಷಾಪ್ರೌಢಿಮೆ ಮತ್ತು ಬೌದ್ಧಿಕ ಮಟ್ಟವನ್ನು ಉತ್ತಮಪಡಿಸಿಕೊಳ್ಳುವಂತಿತ್ತೇ ಹೊರತು, ಭಾರತೀಯ ಸಂಸ್ಕೃತಿಯನ್ನು ಪೋಷಿಸುವಂತಿರಲಿಲ್ಲ. ಹೀಗಾಗಿ ಭಾರತೀಯರ ಮನಸ್ಸು ಕೇವಲ ಬುದ್ಧಿಪ್ರಧಾನವಾಗಲು ಬಯಸಿ, ಭ್ರಷ್ಟವಾಯಿತು. ಇದೇ ಶಿಕ್ಷಣದಲ್ಲೂ ತಲೆದೋರಿ ಈಗಿರುವ ಭ್ರಷ್ಟ ವ್ಯವಸ್ಥೆಗೆ ಕಾರಣವಾಗಿದೆ.

ಈ ಭ್ರಷ್ಟ ವ್ಯವಸ್ಥೆಯನ್ನು ಹೋಗಲಾಡಿಸಲು, ಶಿಕ್ಷಣ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆಯಾಗಬೇಕು; ಒಳ್ಳೆಯ ವ್ಯವಸ್ಥೆಯಾಗಬೇಕು. ನಮ್ಮ ಹಿಂದಿನ ಗುರುಕುಲ ಶಿಕ್ಷಣ ಪದ್ಧತಿಯಲ್ಲಿದ್ದ, ಅಧ್ಯಾತ್ಮಜ್ಞಾನವನ್ನು ಪ್ರಚೋದಿಸುವ, ನೈತಿಕ ಬಲವನ್ನು ವೃದ್ಧಿಸುವ, ಆತ್ಮಬಲವನ್ನು ಪ್ರೇರೇಪಿಸುವ, ಮನೋವೈಶಾಲ್ಯ ಮತ್ತು ಪರಸ್ಪರ ಸೌಹಾರ್ದಗಳನ್ನು ವಿಸ್ತರಿಸುವ ಶಿಕ್ಷಣ ನಮ್ಮದಾಗಬೇಕು.

**ರಾಷ್ಟ್ರಪ್ರಜ್ಞೆ, ರಾಷ್ಟ್ರಪ್ರೇಮ, ವಿಶ್ವಭ್ರಾತೃತ್ವ, ಆಧ್ಯಾತ್ಮಪ್ರಿಯತೆ** – ಇವುಗಳನ್ನು ಹೊಂದಿರುವ ಶಿಕ್ಷಕರು ಇಂದು ಅವಶ್ಯವಾಗಿದ್ದಾರೆ. ಅಂತಹ ಉದಾತ್ತ ಶಿಕ್ಷಕರನ್ನು ತಯಾರುಗೊಳಿಸುವ ತರಬೇತಿ ಕೇಂದ್ರಗಳ ಆವಶ್ಯಕತೆಯಿದೆ. ಈ ತರಬೇತಿಯಲ್ಲಿ ಶಿಕ್ಷಣತತ್ತ್ವವನ್ನಲ್ಲದೆ ಅಧ್ಯಾತ್ಮಜ್ಞಾನವನ್ನೂ ಬೋಧಿಸಬೇಕು. ಅದಕ್ಕೆಂದೇ, ಧ್ಯಾನ, ಯೋಗ, ಪ್ರಾರ್ಥನೆಗಳಲ್ಲಿ ಶಿಕ್ಷಕರಿಗೆ ತರಬೇತಿ ನೀಡಬೇಕು. ಆಗ ಮಾತ್ರ ಶಿಕ್ಷಣವ್ಯವಸ್ಥೆಯಲ್ಲಿ ಪರಿವರ್ತನೆ ಸಾಧ್ಯ, ಆ ಮೂಲಕ ಸಾಮಾಜಿಕ ಪರಿವರ್ತನೆಯೂ ಸಾಧ್ಯ. •